**ಓಎಸ್ ನಂಃ 5/2016**
**ಪಿಡಬ್ಲೂಃ 4**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಡಿ. ವಕೀಲರಿಂದ

ನನ್ನ ಫೈನಾನ್ಸ್ ಕಂಪನಿ ಕಳೆದ ಒಂದು ವರ್ಷದ ಹಿಂದೆ ಮುಚ್ಚಿರುತ್ತೇನೆ. ನನ್ನ ಕಂಪನಿಯ ದಾಖಲೆಗಳು ಇಂದಿಗೂ ನಾನು ಇಟ್ಟುಕೊಂಡಿದ್ದೇನೆ. ಪ್ರತಿವಾದಿ ನಿಮ್ಮ ಫೈನಾನ್ಸ್ ಕಂಪನಿಯಲ್ಲಿ ಜಮೀನು ಡೆವಲಪ್ ಮಾಡಲು ಸಾಲ ಪಡೆದಾಗ ನೀವು ಪ್ರತಿವಾದಿಯಿಂದ ನಿಪಿ-4 ದಾಖಲೆಯನ್ನು ಭದ್ರತೆಗಾಗಿ ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಕಂಪನಿಯಲ್ಲಿ ಸಾಲ ನೀಡುವಾಗ ನೀವು ಪ್ರತಿಯೊಬ್ಬರಿಂದ ನಿಪಿ-4ರಂತಹ ದಾಖಲೆಗಳನ್ನು ಭದ್ರತೆಗಾಗಿ ಪಡೆಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಆರ್ಥಿಕ ಸಂಕಷ್ಟ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಿಮ್ಮಿಂದ ಪಡೆದ ಸಾಲವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನೀವು ಹಣ ಮರುಪಾವತಿ ಮಾಡಿದಾಗ ನಿಡಿ-4 ರಿಂದ 10 ರಶೀದಿಗಳನ್ನು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ರಶೀದಿಗಳು ಸುಳ್ಳಿದ್ದು ಕೇವಲ ನನ್ನ ಕಂಪನಿಯ ನೋಂದಣಿ ಸಂಖ್ಯೆ ಮಾತ್ರ ಸರಿಯಿದೆ ಎಂದು ನುಡಿಯುತ್ತಾರೆ. ನಿಡಿ-4 ರಿಂದ 10 ರಶೀದಿಗಳಲ್ಲಿ ನಿಮ್ಮ ಸಹಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯ ದಾವಾ ಆಸ್ತಿಗ ಸಂಬಂಧಪಟ್ಟ ಖರೀದಿ ಪತ್ರ ನಿಮ್ಮ ಬಳಿ ಇದೆ ಎಂದರೆ ಸರಿಯಲ್ಲ.

ಪ್ರತಿವಾದಿ ವಾದಿಗೆ ಒಂದು ನೋಟೀಸನ್ನು ನೀಡಿದ್ದರು ಎಂದರೆ ಸಾಕ್ಷಿ ನೀಡಿರಬಹುದೆಂದು ನುಡಿಯುತ್ತಾರೆ. ಸದರಿ ನೋಟೀಸ್ ಗೆ ಉತ್ತರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನಾವು ದಾವೆಯನ್ನೇನ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿ ಸಾಲ ಮರುಪಾವತಿ ಮಾಡಿ ನಿಪಿ-4 ದಾಖಲೆಯನ್ನು ಕ್ಯಾನ್ಸಲ್ ಮಾಡಲು ಕೇಳಿಕೊಂಡರೂ ಸಹ ನೀವು ಅವರ ಮಾತನ್ನು ಕೇಳದೆ ಸದರಿ ದಾಖಲೆಯನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸಾಲ ಮರುಪಾವತಿ ಮಾಡಿದರೂ ಸಹ ಕಿರುಕುಳ ಕೊಡುತ್ತಿದ್ದೀರಿ ಎಂದು ಪ್ರತಿವಾದಿ ನಿಮ್ಮ ಮೇಲೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ದೂರಿನಂತೆ ಪೋಲೀಸರು ನಿಮ್ಮನ್ನು ಕರೆಸಿ ಪ್ರತಿವಾದಿಗೆ ಸಂಬಂಧಪಟ್ಟ ಖರೀದಿಪತ್ರವನ್ನು ಹಿಂತಿರುಗಿ ಕೊಡಲು ಸೂಚಿಸಿದ್ದರು ಎಂದರೆ ಸರಿಯಲ್ಲ.

ನಾನು ದಾವೆಯನ್ನು ಸಲ್ಲಿಸಿದ ನಂತರ ದಾವಾ ಆಸ್ತಿಯನ್ನು ನೋಡಿಲ್ಲ. ಈಗ ದಾವಾ ಆಸ್ತಿ ಪ್ರತಿವಾದಿಯೇ ಸಾಗುವಳಿ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಯಾವುದೇ ಖಾಯಿಲೆ ಇಲ್ಲ, ಆಕೆ ನ್ಯಾಯಾಲಯಕ್ಕೆ ಬಂದರೆ ನಿಜ ಹೊರಗೆ ಬರುತ್ತದೆಂದು ತಿಳಿದು ನೀವು ಅವರ ಪರವಾಗಿ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ಎಂದಿಗೂ ನಿಪಿ-4ನ್ನು ದಾವಾ ಆಸ್ತಿಯನ್ನು ಮಾರಾಟ ಮಾಡಲು ನೀಡಿಲ್ಲ ಕೇವಲ ಸಾಲದ ಮರುಪಾವತಿಗಾಗಿ ಭದ್ರತೆಯೆಂದು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಮಗೆ ಈ ದಾವೆಯಲ್ಲಿ ಕೇಳಿದ ಯಾವುದೇ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಡಿ. ವಕೀಲರಿಂದ</u>

ಸಾಯಿ ಲೀಸಿಂಗ್ ಫೈನಾನ್ಸ್ ಬಿಟ್ಟು ನಾನು ಬೇರಾವುದೇ ಫೈನಾನ್ಸ್ ಕಂಪನಿ ನಡೆಸುವುದಿಲ್ಲ. ನಮ್ಮ ಕಂಪನಿಯಲ್ಲಿ ನಾವು ವ್ಯವಹಾರವನ್ನು ಚಕ್ ಮುಖಾಂತರ ಮಾಡುತ್ತೇವೆ. ನಮ್ಮ ಕಂಪನಿಯವರು ಪರಿಚಯಸ್ಥರಿಗೆ ಮಾತ್ರ ಸಾಲ ನೀಡುತ್ತಾರೆ. ನಾವು ಭದ್ರತೆ ಮತ್ತು ಸಾಲದ ದಾಖಲೆಗಳನ್ನು ಪಡೆದು ಸಾಲ ನೀಡುತ್ತೇವೆ. ನಾವು ಭದ್ರತೆಗಾಗಿ ಯಾವುದೇ ಖಾಲಿ ಚಕ್ ಗಳನ್ನು ಮತ್ತು ಆಸ್ತಿಯ ದಾಖಲೆಗಳನ್ನು ಪಡೆಯುವುದಿಲ್ಲ. ನಮಗೆ ಸಾಲ ಹಿಂತಿರುಗಿಸದಿದ್ದರೆ ನಾವು ನ್ಯಾಯಾಲಯದ ಮುಖಾಂತರ ಸಾಲ ಹಿಂತಿರುಗಿ ಪಡೆಯುತ್ತೇವೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಇದು ನಿಮ್ಮ ಸಂಸ್ಥೆಯ ಲೇವಾದೇವಿ ಪರವಾನಿಗೆ ಎಂದು ಕೇಳಿದಾಗ ಸಾಕ್ಷಿ ನೋಡಿ ಒಪ್ಪಿ ದ ಕಾರಣ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3ರಲ್ಲಿರುವ ನಿಮ್ಮ ಪರವಾನಿಗೆ ಸಂಖ್ಯೆಃ1/168/2012-13 ಸರಿಯಾಗಿದೆಯಾ ಎಂದರೆ ಸಾಕ್ಷಿ ಸರಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ 7 ರಶೀದಿಗಳನ್ನು ತೋರಿಸಿ ಸದರಿ ರಶೀದಿಗಳಲ್ಲಿ ನಿಮ್ಮ ಪರವಾನಿಗೆ ಸಂಖ್ಯೆ ಇದೆ ಎಂದು ಕೇಳಿದಾಗ ಸಾಕ್ಷಿ ಅದನ್ನು ನೋಡಿ ಒಪ್ಪಿ ದ ಕಾರಣ ಅವುಗಳನ್ನು ಕ್ರಮವಾಗಿ ನಿಡಿ-4 ರಿಂದ 10 ಎಂದು ಗುರುತಿಸಲಾಯಿತು. ನಿಮ್ಮ ಸಂಸ್ಥೆಯು ಹಣ ಮರುಪಾವತಿ ಮಾಡಿದ ಬಗ್ಗೆ ರಶೀದಿ ಕೊಡುತ್ತಾರೆ ಎಂದರೆ ಸರಿ. ವಾದಿಗೆ ಬಿಪಿ ಹೆಚ್ಚಾಗಿ ಈಗ ಮಾತನಾಡಲು ಬರುವುದಿಲ್ಲ. ಅದನ್ನು ಬಿಟ್ಟು ಆಕೆಗೆ ಬೇರಾವುದೇ ಖಾಯಿಲೆ ಇಲ್ಲ. ಈ ಮೊದಲು ವಾದಿ ನನಗೆ ಒಟ್ಟು ಮುಕ್ತಿಯಾರ್ ಪತ್ರವನ್ನು ನೀಡಿದ್ದರು ಎಂದರೆ ಸರಿ. ಹಾಗಾದರೆ ನಿಮಗೆ 2 ಬಾರಿ ವಾದಿ ಒಟ್ಟು ಮುಕ್ತಿಯಾರ್ ಪತ್ರವನ್ನು ನೀಡಿದ್ದರು ಎಂದರೆ ಸರಿ.

ನನಗೆ ಗುರುಚಂದ್ ತಂದೆ ಪಾಂಡುರಂಗ್ ಇವರ ಪರಿಚಯ ಇದೆ. ಅವರು ನಿಮ್ಮಿಂದ ಸಾಲ ಪಡೆದಿದ್ದರು ಎಂದರೆ ಸರಿ. ಅವರು ನಿಮ್ಮ ಮೇಲೆ ಒಂದು ಕ್ರಿಮಿನಲ್ ಪ್ರಕರಣ ಹೂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಒಂದು ಕಿಡ್ನಾಪಿಂಗ್ ಪ್ರಕರಣ ನನ್ನ ವಿರುದ್ಧ ಹೂಡಿದ್ದು ಅದು ಈಗಾಗಲೇ ನಾನು ನಿರ್ದೋಷಿ ಎಂದು ನಿಕಾಲಿಯಾಗಿದೆ ಎಂದು

ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಪ್ರ.ವರ್ತಮಾನ ವರದಿಯ ದೃಢೀಕೃತ ನಕಲು, ಅದರ ದೂರಿನ ದೃಢೀಕೃತ ನಕಲು, ಸದರಿ ಪ್ರಕರಣದ ಆದೇಶ ಪ್ರತಿಯ ದೃಢೀಕೃತ ನಕಲು, ಜಾಮೀನಿಗಾಗಿ ಸಲ್ಲಿಸಿದ ಅರ್ಜಿ ಮತ್ತು ಸದರಿ ಜಾಮೀನಿನ ಅರ್ಜಿಯನ್ನು ಹಿಂತಿರುಗಿ ಪಡೆಯಲು ನೀಡಿದ ಅರ್ಜಿ ಮತ್ತು ವಕಾಲತ್ ನಾಮೆಯ ದೃಢೀಕೃತ ನಕಲುಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ ಕಾರಣ ಪ್ರ.ವರ್ತಮಾನ ವರದಿಯನ್ನು ನಿಡಿ-11 ಎಂದು, ದೂರಿನ ದೃಢೀಕೃತ ನಕಲುಗಳನ್ನು ನಿಡಿ-12 ಎಂದು, ನ್ಯಾಯಾಲಯದ ಆದೇಶ ಪ್ರತಿಯ ದೃಢೀಕೃತ ನಕಲುಗಳನ್ನು ನಿಡಿ- 13 ಎಂದು, ಜಾಮೀನಿನ ಅರ್ಜಿಯ ದೃಢೀಕೃತ ನಕಲುಗಳನ್ನು ನಿಡಿ-14 ಎಂದು, ಸದರಿ ಜಾಮೀನಿನ ಅರ್ಜಿಯನ್ನು ಹಿಂಪಡೆಯಲು ನೀಡಿದ ಅರ್ಜಿಯ ದೃಢೀಕೃತ ನಕಲುಗಳನ್ನು ನಿಡಿ-15 ಎಂದು, ವಕಾಲತ್ ನಾಮೆಯ ದೃಢೀಕೃತ ನಕಲುಗಳನ್ನು ನಿಡಿ-16 ಎಂದು ಗುರುತಿಸಲಾಯಿತು. ನಾನು ಗುರುಚಂದ್ ಇವರಿಗೆ ನನ್ನ ಫೈನಾನ್ಸ್ ಕಂಪನಿ ಮೂಲಕವೇ ಸಾಲ ನೀಡಿದ್ದೆ. ಅದೇ ವ್ಯವಹಾರದ ಸಂಬಂಧ ನಿಡಿ-11 ರಿಂದ 16 ರಂತೆ ಪ್ರಕರಣ ಆಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಈ ದಾವೆಯ ಪ್ರತಿವಾದಿಯೇ ಜಾಮೀನುದಾರನಾಗಿದ್ದ ಎಂದರೆ ಸರಿ. ನಾನು ಅಥವಾ ನನ್ನ ಹೆಂಡತಿ ದಾವಾ ಆಸ್ತಿಯನ್ನು ಖರೀದಿಸುವ ಮೊದಲು ಬೇರಾವುದೇ ಜಮೀನಿನ ಖರೀದಿ ವ್ಯವಹಾರ ಮಾಡಿಲ್ಲ. ಸಾಕ್ಷಿಗೆ ಈಗ ಒಂದು ದಿಃ 08.01.2013ರ ಖರೀದಿ ಕರಾರು ಪತ್ರದ ನಕಲನ್ನು ತೋರಿಸಿ ಸದರಿ ಖರೀದಿ ಕರಾರು ಪತ್ರ ನೀವೇ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಅದನ್ನು ಒಪ್ಪಿದ ಕಾರಣ ಸದರಿ ಖರೀದಿ ಕರಾರು ಪತ್ರವನ್ನು ನಿಡಿ- 17 ಎಂದು ಗುರುತಿಸಲಾಯಿತು. ನಿಡಿ-17ರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ. ನಿಡಿ- 17 ದಾಖಲೆಯೊಂದಿಗಿರುವ ಪ್ರಮಾಣ ಪತ್ರವನ್ನು ನೀವೇ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಅದನ್ನು ನಿರಾಕರಿಸಿದ್ದು ಗುರುತಿಸುವಿಕೆಗಾಗಿ ಸದರಿ ದಾಖಲೆಯನ್ನು ನಿಸಿ-2 ಎಂದು ಗುರುತಿಸಲಾಯಿತು. 2013ರಲ್ಲಿ ಕೃಷಿ ಜಮೀನು ಇಲ್ಲದಿದ್ದ ವ್ಯಕ್ತಿಗಳು ಕೃಷಿ ಜಮೀನನ್ನು ಖರೀದಿ ಮಾಡಲು ಬರುತ್ತಿರಲಿಲ್ಲ ಆದ ಕಾರಣ ನೀವು ಪ್ರತಿವಾದಿ ನಿಮ್ಮ ಸಂಬಂಧಿಕ ಎಂದು ಸುಳ್ಳು ಪ್ರಮಾಣ ಪತ್ರ ನಿಸಿ-2 ರಂತೆ ನೀಡಿದ್ದೀರಿ ಎಂದರೆ ಸರಿಯಲ್ಲ. ನನಗೆ ಶಿವಶರಣಪ್ಪ ಸೀಕನೂರು ಇವರ ಪರಿಚಯ ಇದೆ ಆದರೆ ನಿಡಿ-17 ದಾಖಲೆ ಸುಳ್ಳು ದಾಖಲೆ ಎಂದು ನುಡಿಯುತ್ತಾರೆ. ನೀವು ಮತ್ತು ಪ್ರತಿವಾದಿ ಒಂದೇ ಜಾತಿಯವರು ಎಂದರೆ ಸರಿಯಲ್ಲ.

ಪ್ರತಿವಾದಿ ನಿಮ್ಮ ಮೇಲೆ ಒಂದು ದೂರನ್ನು ನೀಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಈ ದಾವೆಯನ್ನು ವಾದಿ ಸಲ್ಲಿಸಿದ ಕಾರಣ ಸುಳ್ಳು ದೂರನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಬೆಳಗಿನ ಸಮಯ ಮುಕ್ತಾಯವಾದ ಕಾರಣ ಮುಂದುವರದ ಪಾಟೀ ಸವಾಲನ್ನು ಮಧ್ಯಾಹ್ನದ ನಂತರಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.